# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | ೨೫(465) |
| ಸದಸ್ಯರ ಹೆಸರು | : | ಶ್ರೀ ಸಿ.ಎಂ.ಇಬ್ರಾಹಿಂ |
| ಉತ್ತರಿಸುವ ದಿನಾಂಕ: | : | 23-09-2020 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1 | ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನಾಗವಾರ ಗ್ರಾಮದ ಹಲವಾರು ಸರ್ವೆ ನಂಬರ್ ಜಮೀನುಗಳು ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಭೂಸ್ವಾಧೀನವಾಗಿದ್ದು, ಈ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಭೂಸ್ವಾಧೀನಪಡಿಸಿಕೊಂಡ ಭೂಮಾಲೀಕರು/ ರೈತರಿಗೆ ಎಷ್ಟು ಜಮೀನನ್ನು ವಿಸ್ತರಣೆ ಮಾಡಲಾಗಿದೆ? ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಒದಗಿಸುವುದು. | ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಭೂಸ್ವಾಧೀನಪಡಿಸಿದ ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನಾಗವಾರ ಗ್ರಾಮದ ಒಟ್ಟು ವಿಸ್ತೀರ್ಣದ ಪೈಕಿ ಸರ್ವೇ ನಂ. 52/1, 78/6, 21 ರಿಂದ 25, 33 ರಿಂದ 51, 76 ರಿಂದ 88 ಮತ್ತು 26/2ರಲ್ಲಿನ ಒಟ್ಟು 52-17 ಎಕರೆ ಜಮೀನನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೆಚ್.ಎಂ.ಟಿ. ಗೃಹ ನಿರ್ಮಾಣ ಸಹಕಾರ ಸಂಘದ ವಿರುದ್ಧ ಸೈಯ್ಯದ್ ಖಾದರ್ ಪ್ರಕರಣ ಹಾಗೂ ಸಿವಿಲ್ ಅಪೀಲ್ 1930/2012 (S.L.P. No.: 24972/2012)ರಲ್ಲಿ ನೀಡಿರುವ ಆದೇಶದನ್ವಯ ಪ್ರಶ್ನಿತ ಜಮೀನಿನ ಭೂಮಾಲೀಕರಿಗೆ ಪಾವತಿಸಲಾದ ಪರಿಹಾರ ಧನವನ್ನು ವಾಪಸ್ಸು ಪಡೆದುಕೊಂಡು ಅಂದಿನ ಭೂಮಾಲೀಕರಿಗೆ ಜಮೀನನ್ನು ಹಿಂದಿರುಗಿಸುವಂತೆ ಸರ್ಕಾರದ ಆದೇಶ ಸಂಖ್ಯೆ: ಕಂಇ 134 ಭೂಸ್ವಾಬೆ 2007(ಭಾಗ), ದಿನಾಂಕ: 04-6-2013ರಲ್ಲಿ ಆದೇಶಿಸ ಲಾಗಿರುತ್ತದೆ.<br><br>ಮುಂದುವರೆದು, ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘ ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:32482-85/2013, 31832/2013, 32941-53/2013ರ ಪ್ರಕರಣಗಳನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 04-03-2014ರಂದು ನೀಡಿರುವ ತೀರ್ಪಿನಲ್ಲಿ ದಿನಾಂಕ: 04-06-2013ರ ಸರ್ಕಾರದ ಆದೇಶವನ್ನು ರದ್ದುಪಡಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ನೀರೀಕ್ಷಿಸುವಂತೆ ತಿಳಿಸಿರುತ್ತದೆ.<br><br>ಶ್ರೀ ಜೇಮ್ಸ್ ರಾಜು ರೆಡ್ಡಿ ಮತ್ತು ಇತರರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ S.L.P. No.: 36857-860/2014 (Civil Appeal 2505-258/2019) ಪ್ರಕರಣಗಳನ್ನು ದಾಖಲಿಸಿದ್ದು, ಪ್ರಕರಣಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವುದರಿಂದ ಪ್ರಕರಣದ ಅಂತಿಮ ತೀರ್ಮಾನವನ್ನು ನಿರೀಕ್ಷಿಸಲಾಗಿದೆ. |
| 2 | ವಿಸ್ತರಣೆಯಾಗಿದ್ದಲ್ಲಿ? ಯಾವ ಯಾವ ಸರ್ವೆ ನಂಬರ್‌ಗಳಿಗೆ ವಿಸ್ತರಣೆ ಮಾಡಲಾಗಿದೆ? (ದಾಖಲೆ ನೀಡುವುದು) | ಉದ್ಭವಿಸುವುದಿಲ್ಲ. |
| 3 | ಸಂಪೂರ್ಣ ವಿಸ್ತರಣೆಯಾಗಿದೇ ಇದ್ದಲ್ಲಿ ಕಾರಣವೇನು ? (ವಿವರ ನೀಡುವುದು) | ಉದ್ಭವಿಸುವುದಿಲ್ಲ. |

..2.

| | | |
|---|---|---|
| 4 | ಯಾವ ಯಾವ ಜಮೀನಿನ ಭೂ ಮಾಲೀಕರು / ರೈತರಿಗೆ ಸುಪರ್ದಿ ನೀಡಲಾಗಿದೆ? (ದಾಖಲೆಗಳನ್ನು ನೀಡುವುದು. | ಉದ್ಭವಿಸುವುದಿಲ್ಲ. |
| 5 | ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಭೂಸ್ವಾಧೀನ ರದ್ದುಪಡಿಸಿರುವ ವಿಷಯದ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ಅಂದರೆ ಬಿ.ಡಿ.ಎ., ಬಿ.ಬಿ.ಎಂ.ಪಿ. ಮತ್ತು ಇತರರಿಗೆ ಮಾಹಿತಿ/ನಿರ್ದೇಶನ/ಸೂಚನೆಯನ್ನು ನೀಡಲಾಗಿದೆಯೇ? ನೀಡಿದ್ದಲ್ಲಿ ದಾಖಲೆಗಳನ್ನು ಒದಗಿಸುವುದು. ನೀಡಿದ್ದಲ್ಲಿ ಕಾರಣವೇನು? | ಉದ್ಭವಿಸುವುದಿಲ್ಲ. |
| 6 | ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಭೂಸ್ವಾಧೀನಕ್ಕೆ ಸಂಬಂಧಪಟ್ಟ ಕಡತಗಳ ಸಂಪೂರ್ಣ ವಿವರಗಳನ್ನು ನೀಡುವುದು. | ಕಡತಗಳ ಪಟ್ಟಿ ಲಗತ್ತಿಸಿದೆ. |

ಕಂಇ 40 ಭೂಸ್ವಾಬ 2020

(ಆರ್. ಅಶೋಕ್)
**ಕಂದಾಯ ಸಚಿವರು**

**ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಯಿಂದ ಭೂಸ್ವಾಧೀನ-2 ಶಾಖೆಯಲ್ಲಿ ಸ್ವೀಕೃತಗೊಂಡ ಕಡತಗಳಲ್ಲಿ ಪ್ರಸ್ತುತ ಭೌತಿಕವಾಗಿ ಲಭ್ಯವಿರುವ ಕಡತಗಳ ಪಟ್ಟಿ**

| | |
|---|---|
| 1 | LAQ (6) LAC 447/85-86 |
| 2 | LAC 409/86-87 |
| 3 | LAQ CR 2/84-85 |
| 4 | LAC 401/85-86 |
| 5 | LAQ (1) SR 289/83-84 |
| 6 | W.P.21963/2005 |
| 7 | ತಿಳುವಳಿಕೆ |
| 8 | W.P. NO-30616 |
| 9 | LAQ (11) SR 289/83-84 |
| 10 | LAC 415/85-86 |
| 11 | LAC 456/85-86 |
| 12 | LAC 435, 440/85-86 |
| 13 | LAC 398/85-86 |
| 14 | LAQ (3) SR 13/99-2000 |
| 15 | LAC 441/85-86 |
| 16 | LAC SR 289/83-84 |
| 17 | LAC 441/85-86 |
| 18 | LAC 407/85-86 |
| 19 | WP NO-32526 TO 32530 |
| 20 | CHALLAN FILE ಭೂಮಲೀಕರು SLAO ಸಂಸ್ಥೆಗೆ ಹಿಂದಿರುಗಿಸಿರುವ ಬಗ್ಗೆ |
| 21 | LAQ (B)SR 13/99-2000 |
| 22 | LAQ SR 13/99-2000 |
| 23 | LAC 408/85-86 |
| 24 | LAC 413/417,416,/85-86, |
| 25 | WP 13902/99-2000LAC 447/8586 |
| 26 | XEROX COPIES |
| 27 | LAC 434/85-86 |
| 28 | LAC 410/85-86 |
| 29 | LAC 426/85-86 |
| 30 | LAC 455/85-86 |
| 31 | LAC 449/85-86 |
| 32 | LAC 445/85-86 |
| 33 | LAC 407/418/ 85-86 notices |
| 34 | LAQ CR 9/86-87 |
| 35 | LAQ (11) SR 289/83-84 } |
| 36 | LAC 388/85-86 } |
| 37 | ಅಕ್ರಮ ತಿದ್ದುಪಡಿ ಮಾಡದೇ ಇರುವ ಬಗ್ಗೆ ತಿಳುವಳಿಕೆ ಪತ್ರ |
| 38 | Mixed file |